ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 30-32
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನಕನ ಕಲ್ಲು

**ಚಲುವರಾಜು ಎಂ. ಎಲ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***
*ನಗರಗಳು ಬೆಳವಣಿಗೆಯನ್ನು ಪಡೆಯುವ ಪೂರ್ವದಲ್ಲಿ ಬಹಳ ಮಂದಿ ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದವರು. ಜೀವನಕ್ರಮಗಳು ಬದಲಾದಂತೆ ಜೀವನಾವಶ್ಯಕತೆಗಳನ್ನು ಅರಸುತ್ತಾ ಜನಪ್ರವಾಹ ಕ್ರಮೇಣ ನಗರಗಳತ್ತ ಹರಿಯುತ್ತದೆ. ಅವರು ತಾವು ತಂದ ಜನಪದ ಸಂಸ್ಕೃತಿಯನ್ನು ಎಷ್ಟೋ ವರ್ಷಗಳವರೆಗೆ ಸಂರಕ್ಷಿಸಿಕೊಂಡು ಬರುತ್ತಾರೆ.*

***Keywords:*** *ಕನ್ನಡ ಸಾಹಿತ್ಯ, ಜಾನಪದ, ಜನಪದ ಸಂಸ್ಕೃತಿ, ಕನಕನ ಕಲ್ಲು.*

## ಪೀಠಿಕೆ

'ನಾಟಕವನ್ನುನಾಗರಿಕತೆ ಪ್ರಭಾವ ಹೆಚ್ಚಿದಂತೆ ವಿದ್ಯಾಮಟ್ಟ ಸುಧಾರಿಸಿದಂತೆ, ಅವರಿಂದ ಜನಪದ ಸಂಸ್ಕೃತಿಯ ಕೆಲವು ಅಂಶಗಳು ಕುಸಿಯತೊಡಗುತ್ತವೆ. ಸಂಪೂರ್ಣವಾಗಿ ನಗರ ಜೀವನದಲ್ಲಿ ಲೀನವಾಗಿ ತಮ್ಮ ಸರ್ವಜ್ಞಾನವನ್ನು ಶಾಲೆ–ಕಾಲೇಜುಗಳ ಮೂಲಕ, ಪುಸ್ತಕ ಭಂಡಾರಗಳ ಮೂಲಕ, ಅಧ್ಯಾಪಕ, ಪ್ರಾಧ್ಯಾಪಕರ ಮೂಲಕ, ಪ್ರಯೋಗಾಲಯ, ವೃತ್ತಪತ್ರಿಕೆ, ರೇಡಿಯೋಗಳ ಮೂಲಕ ಬೆಳೆಸಿಕೊಳ್ಳುವಾಗ ಜಾನಪದ ಎನ್ನಬಹುದಾದ ಸಂಪ್ರದಾಯ–ನಂಬಿಕೆಗಳು, ಆಚಾರ–ವಿಚಾರಗಳು ಮಸುಕಾಗಿ, ಅಸ್ಪಷ್ಟವಾಗಿ ಕ್ರಮೇಣ ದುರ್ಬಲವಾಗಿ ಬಿಡುತ್ತವೆ. ಆದರೆ ಸಂಪೂರ್ಣ ನಾಶವನ್ನು ಅನುಭವಿಸುವುದಿಲ್ಲ. ಕಥೆ ಹೇಳುವ ಅನುಭವಿಗಳು ತೀರಿಕೊಳ್ಳಬಹುದು, ಆದರೂ ಜಾನಪದ ಒಂದಲ್ಲ ಒಂದು ರೀತಿಯಲ್ಲಿ ಅಲ್ಲಿ ಉಸಿರಾಡುತ್ತಲೇ ಇರುತ್ತದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ ಗ್ರಾಮದ ಪ್ರಮುಖ ಹಾಗೂ ವಿಶಿಷ್ಟ ನಂಬಿಕೆ ಜೀವಂತವಾಗಿರುವುದು ಇದಕ್ಕೆ ಒಂದು ನಿದರ್ಶನ. ನಾಡಿನ ಪ್ರತಿಯೊಂದು ಸಮುದಾಯವೂ ಒಬ್ಬ ಮೂಲಪುರುಷನನ್ನು ಗುರುತಿಸಿಕೊಂಡಿದೆ. ಮಹದೇವಪುರ ಗ್ರಾಮದ ನಾಯಕ ಸಮುದಾಯವು, ಕುರುಬ ಸಮುದಾಯದ ಮೂಲ ಪುರುಷರು ಎಂದು ಗುರುತಿಸುವ ಕನಕದಾಸರನ್ನು ಆರಾಧಿಸುವ ವಿಶಿಷ್ಟವಾದ ನಂಬಿಕೆ ಮತ್ತು ಸಂಪ್ರದಾಯಗಳು ಅಚ್ಚರಿಯನ್ನು ಮೂಡಿಸುತ್ತದೆ.

ದಾಸ ಶ್ರೇಷ್ಠರಲ್ಲಿ ಒಬ್ಬರಾದ ಕನಕದಾಸರು ಯಾತ್ರಾರ್ಥಿಯಾಗಿ ದಕ್ಷಿಣದತ್ತ ಬಂದು ಪಟ್ಟಣಕ್ಕೆ ಅನತಿ ದೂರದಲ್ಲಿ ಕಾವೇರಿ ನದಿಯ ಮಧ್ಯೆ ಬಂಡೆಯ ಮೇಲೆ ಕುಳಿತು ಧ್ಯಾನ ಮಾಡಿದ ತಾಣ **'ಕನಕನ ಕಲ್ಲು'** ಎಂದೇ ಪ್ರಸಿದ್ಧಿ ಪಡೆದಿದೆ.

***Please cite this article as:*** ಚಲುವರಾಜು, ಎಂ.ಎಲ್. (2025). ಕನಕನ ಕಲ್ಲು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(5), 30–32

ಜಾತಿ, ಕುಲ, ಪಂಥಗಳನ್ನು ಮೀರಿ ಬದುಕಬೇಕು ಎಂದು ಮನುಕುಲಕ್ಕೆ ಮಹತ್ವದ ಸಂದೇಶ ಸಾರಿದ ಕನಕದಾಸರು ಪಟ್ಟಣದ ಪೂರ್ವ ದಿಕ್ಕಿನಲ್ಲಿರುವ ಮಹದೇವಪುರ ಗ್ರಾಮದ ಬಳಿ ಕೆಲಕಾಲ ತಂಗಿದ್ದರು, ಶ್ರೀರಂಗನಾಥನ ದರ್ಶನ ಪಡೆದು ಇನ್ನೆಷ್ಟು ಕಾಲ ನೀನಿಲ್ಲಿ ಮಲಗಿದ್ದರೂ ನಿನ್ನನೆಬ್ಬಿಸುವವರೊಬ್ಬರನೂ ಕಾಣೆ ಶ್ರೀರಂಗಪಟ್ಟಣದ ರಂಗನಾಥ........ ಎಂದು ಹಾಡುತ್ತಾ ಶಿವನಸಮುದ್ರದ ಮಧ್ಯರಂಗನ ದರ್ಶನಕ್ಕಾಗಿ, ಪೂರ್ವಾಭಿಮುಖವಾಗಿ ತೆರಳುವ ಮಾರ್ಗ ಮಧ್ಯದಲ್ಲಿ ಮಹದೇವಪುರದಲ್ಲಿ ಉಳಿದಿದ್ದರು. ಈ ಊರಿನಲ್ಲಿ ಇದ್ದಷ್ಟೂ ದಿನ ಕನಕದಾಸರು ಧ್ಯಾನ ಮಾಡುತ್ತಿದ್ದ ನದಿಯ ಮಧ್ಯೆ ಇರುವ ಬಂಡೆ ಕನಕನ ಭಕ್ತರ ಪಾಲಿಗೆ ಯಾತ್ರಾ ಸ್ಥಳವಾಗಿದೆ.

ಮಹದೇವಪುರ ಕಾಶಿವಿಶ್ವನಾಥ ದೇವಾಲಯಕ್ಕೆ ಕೂಗಳತೆ ದೂರದಲ್ಲಿ ನದಿಯ ಮಧ್ಯೆ ಸೀಳಿದಂತಿರುವ ಜೋಡುಕಲ್ಲುಗಳ ಪೈಕಿ ತುಸು ದೊಡ್ಡದಾದ ಬಂಡೆಯ ಮೇಲೆ ಕನಕದಾಸರು ಕುಳಿತು ಮಜ್ಜನಗೈದು ಶ್ರೀಹರಿಯನ್ನು ಸ್ಮರಿಸುತ್ತಿದ್ದರು ಎಂಬ ಮಾತು ಈ ಭಾಗದಲ್ಲಿ ಪ್ರಚಲಿತದಲ್ಲಿದೆ. ನದಿಯಲ್ಲಿ ನೀರಿನ ಮಟ್ಟ ಕಡಿಮೆ ಇದ್ದಾಗ ಬೇಸಿಗೆಯಲ್ಲಿ (ಮಾರ್ಚಿಯಿಂದ–ಮೇ ತಿಂಗಳವರೆಗೆ) ಈ ಕಲ್ಲು ಸ್ಪಷ್ಟವಾಗಿ ಗೋಚರಿಸುತ್ತದೆ. ನದಿಯ ದಡದಿಂದ ಸುಮಾರು 80 ಮೀಟರ್ ಅಂತರದಲ್ಲಿರುವ **'ಕನಕನ ಕಲ್ಲು'** ಸ್ಪರ್ಶಿಸಲು ತೆಪ್ಪ (ಹರಿಗೋಲು) ದಲ್ಲಿ ಹೋಗಬೇಕು.

**ಕನಕನ ಗುಡಿ**

ಕನಕದಾಸರು ಇಲ್ಲಿಗೆ ಭೇಟಿ ನೀಡಿದ್ದ ಜ್ಞಾಪಕಾರ್ಥವಾಗಿ ಅಂಬಿಗರು (ಗಂಗಾಮತಸ್ಥರು) ಕಾವೇರಿ ನದಿಯ ದಂಡೆಯ ಮೇಲೆ ಪುಟ್ಟದಾದ ಗುಡಿ ಕಟ್ಟಿಸಿ ಕನಕನ ಮೂರ್ತಿ ಸ್ಥಾಪಿಸಿದ್ದು, ನಿತ್ಯವೂ ಪೂಜೆ ನಡೆಯುತ್ತದೆ. ಗಂಗಾಮತಸ್ಥರು ವರ್ಷಕ್ಕೊಮ್ಮೆ ಕನಕನ ಹಬ್ಬ ಆಚರಿಸುತ್ತಾರೆ. ಯುಗಾದಿ ಹಬ್ಬದಂದು ಹತ್ತು ದೇವರ ಕೂಟ ಇಲ್ಲಿ ನಡೆಯುತ್ತದೆ.

**ಪವಾಡದ ಕತೆ**

16ನೆಯ ಶತಮಾನದಲ್ಲಿ ನದಿ ದಾಟಲು ದೋಣಿಗಳನ್ನು ಆಶ್ರಯಿಸಬೇಕಿತ್ತು. ನದಿ ದಾಟಲು ಕನಕದಾಸರು ದೋಣಿ ಏರಲು ಮುಂದಾದಾಗ ಉನ್ನತ ಅಂಬಿಗ ಕುಲದವರು ವಿರೋಧ ವ್ಯಕ್ತಪಡಿಸಿದರಂತೆ, ಕನಕದಾಸರು ಹಿಂದುಳಿದ ಜಾತಿಗೆ ಸೇರಿದವರು ಎಂಬುದು ಮತ್ತೊಂದು ಕಾರಣವಂತೆ. ದೋಣಿ ಏರಲು ಅವಕಾಶ ನೀಡದ್ದರಿಂದ ಕನಕದಾಸರು ಅಲ್ಲೇ ನದಿಯ ದಂಡೆಯಲ್ಲಿದ್ದ ನಿಂಗೇಗೌಡ ಎಂಬ ರೈತನ ಬಾಳೆ ತೋಟಕ್ಕೆ ಹೋಗಿ ಬಾಳೆಎಲೆ ಕೇಳಿದಾಗ, ಕೊಡದೆ ಹೀಯಾಳಿಸುತ್ತಾರೆ. ನಂತರ ಪಕ್ಕದಲ್ಲಿದ್ದ ಮತ್ತೊಂದು ಬಾಳೆತೋಟಕ್ಕೆ ಹೋಗಿ, ಬಾಳೆಎಲೆ ಕೇಳಿದಾಗ ತೋಟದ ಮಾಲೀಕ ಅಗಸರ ನಿಂಗಪ್ಪ ಅತಿ ಗೌರವದಿಂದ ನಡೆದುಕೊಂಡು ಬಾಲೆಎಲೆಯನ್ನು ಕೊಟ್ಟನು.

ಕನಕದಾಸರು ಈ ಬಾಳೆಎಲೆಯನ್ನು ನೀರಿನ ಮೇಲೆ ಹಾಸಿ ಎಲೆಯ ಮೇಲೆ ಕರ್ಪೂರ ಹಚ್ಚಿ, ಅದೇ ಎಲೆಯ ಮೇಲೆ ಕುಳಿತು ನದಿ ದಾಟುವಾಗ, ನೀರಿನ ಮಧ್ಯೆ ಸಿಕ್ಕ ಬಂಡೆಕಲ್ಲಿನ ಮೇಲೆ ಕುಳಿತು ತನ್ನ ಕರುಳನ್ನು ಬಗೆದು ತೊಳೆದು ಅನಂತರ ಅದೇ ಕಲ್ಲಿನ ಮೇಲೆ ಒಣಗಿಸಿ ಅವುಗಳನ್ನು ಮತ್ತೆ ಉದರದಲ್ಲಿ ಹಾಕಿಕೊಂಡು ಸವರ್ಣಿಯರನ್ನು ಕುರಿತು **'ಮಹಾಶಯರೇ ನಾನು ಈಗ ಪರಿಶುದ್ಧನೇ?'** ಎಂದು ಕೇಳುತ್ತಾ, ನಾನು ಶರೀರದ, ಚರ್ಮದ ಕೊಳೆಯನ್ನು ಶುಚಿಗೊಳಿಸಿ ದೇಹ ಪರಿಶುದ್ಧತೆಯಿಂದ ದೇವರನ್ನು ಪ್ರಾರ್ಥಿಸಿ ಭಗವಂತನಿಗೆ ಹತ್ತಿರವಾಗಿ ತಾನೊಬ್ಬ ಶ್ರೇಷ್ಠ ಭಕ್ತ ಎಂಬುದನ್ನು ತೋರ್ಪಡಿಸಿದ್ದೇನೆ. ಆದರೆ ಮೇಲ್ವರ್ಗದವರಾದ ತಾವು ತಮ್ಮ ಮನಸ್ಸಿನ ದ್ವೇಷ, ಅಸೂಯೆ, ಮೇಲು–ಕೀಳು ಎಂಬ ಸಂಕುಚಿತ ಮನೋಭಾವದಿಂದ ಮಡಿ–ಮೈಲಿಗೆ ಎಂಬ ಬೇಧ ಭಾವವನ್ನು ಎಣಿಸುತ್ತಾ ಕೆಳವರ್ಗದವರನ್ನು ಕೀಳಾಗಿ ಕಾಣುವುದು ಸರಿಯಲ್ಲವೆಂದು ತಿಳಿ ಹೇಳಿದರಂತೆ. ಈ ದೃಶ್ಯ ಕಂಡು ಹಿಂದೆ ತಿರಸ್ಕರಿಸಿದ ಅಂಬಿಗರು ತಮ್ಮ ತಪ್ಪಿನ ಅರಿವಾಗಿ ತಮ್ಮ ಸಮುದಾಯಕ್ಕೆ, ತಮ್ಮ ವೃತ್ತಿಗೆ

ಯಾವುದೇ ತೊಂದರೆಯಾಗದಂತೆ ಮನ್ನಿಸುವಂತೆ, ಕನಕದಾಸರಲ್ಲಿ ಕೇಳಿಕೊಂಡಾಗ ದಾಸರು ಕಾವೇರಿ ನದಿಯ ಈ ಸ್ಥಳದಲ್ಲಿ ದೋಣಿ ದುರಂತವಾಗದಿರಲಿ. ಪ್ರಯಾಣಿಕರು ಸುರಕ್ಷಿತವಾಗಿ ದಡ ಸೇರಲಿ, ಅಗಸರ ನಿಂಗಪ್ಪನ ಬಾಳೆತೋಟ ಅಭಿವೃದ್ಧಿ ಕಾಣಲಿ ನಿಂಗೇಗೌಡನ ತೋಟದ ಬಾಳೆಗೊನೆ ಮೂಡದಿರಲಿ ಎಂದು ಅಭಯವಿತ್ತರಂತೆ. ಅಂದಿನಿಂದ ಇಂದಿನವರೆಗೂ ಯಾವುದೇ ದೋಣಿ ದುರಂತ ಇಲ್ಲಿ ಸಂಭವಿಸಿ ಸಾವು–ನೋವು ಆಗಿಲ್ಲವೆಂದು, ನಿಂಗೇಗೌಡನ ತೋಟದಲ್ಲಿ ಬಾಳೆಗೊನೆ ಚದುರದೆ ಇರುವುದು ಒಂದು ಅಚ್ಚರಿಯೇ ಸರಿ ಎಂದು ಮಹದೇವಪುರದ ಜನರು ಇದನ್ನು ಸ್ಮರಿಸಿಕೊಳ್ಳುತ್ತಾರೆ ಹಾಗೂ ದೋಣಿ ನಡೆಸುವವರ ವೃತ್ತಿಗೆ ಯಾವುದೇ ತೊಂದರೆ ಆಗದೇ ಇರುವುದರಿಂದ ಕನಕದಾಸರನ್ನು ದೈವವಾಗಿ ಪೂಜಿಸುತ್ತಾ ತಮ್ಮ ಕಸುಬನ್ನು ಮುಂದುವರಿಸಿದರು.

ಕನಕದಾಸರು ಕುಳಿತ ಅ ಕಲ್ಲಿನ ಮೇಲೆ ಬಂಡೆಯ ಮೇಲೆ ಬಲಗಡೆ ಕಾಲಿನ ಗುರುತು ಕಾಣುತ್ತದೆ ಎಂಬ ಕತೆಯನ್ನು, ತನ್ನ ಮುತ್ತಾತನಿಂದ ಕೇಳಿದ ಕತೆಯನ್ನು ಕನಕನ ಗುಡಿಯ ಅರ್ಚಕ ದಾಸಪ್ಪ, ದೋಣಿ ನಡೆಸುವ ಕುಲದವರಾದ ಬೋರಪ್ಪ ಹೇಳುತ್ತಾರೆ.

ಕನಕದಾಸರು ದಾಸ ಪರಂಪರೆಗೆ ಸೇರಿದವರಾಗಿದ್ದರಿಂದ ದಾಸಯ್ಯ ಮನೆತನದವರೇ (ಅನ್ಯ ಸಮುದಾಯ) ಪೂಜೆ ಸಲ್ಲಿಸುತ್ತಾರೆ. ಸಂಕ್ರಾಂತಿ ಹಬ್ಬ ಆದನಂತರ, ಶಿವರಾತ್ರಿ ಮುನ್ನ ವರ್ಷಕ್ಕೊಮ್ಮೆ **'ಪರ' (ಅನ್ನ ಸಂತರ್ಪಣೆ) ಎಲ್ಲಾ ಕೋಮಿನವರೂ ದೇವರ ಪ್ರಸಾದಕ್ಕಾಗಿ ಜಾತಿ ಬೇಧವಿಲ್ಲದೆ (ವಿಶೇಷ) ಒಂದೇ ಸಾಲಿನ ಪಂಕ್ತಿಯಲ್ಲಿ ಕುಳಿತು ಊಟ ಮಾಡುತ್ತಾರೆ.** ದೇವರ ದರ್ಶನ ಪಡೆಯುತ್ತಾರೆ. ಊರಿನ ನಾಯಕ ಸಮುದಾಯದ ಜನರು ಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಎಲ್ಲಾ ಸಮುದಾಯದವರಿಗೂ ದೇವರ ದರ್ಶನಕ್ಕೆ, ಪ್ರಸಾದ ಸ್ವೀಕಾರಕ್ಕೆ ಅವಕಾಶವಿದೆ. ಒಟ್ಟಾರೆಯಾಗಿ ಸಾಮಾಜಿಕ ಸಾಮರಸ್ಯ ಮಹದೇವಪುರ ಗ್ರಾಮದಲ್ಲಿ ನೆಲೆಸಿದೆ. ಪ್ರತಿ ಸಮುದಾಯವರೂ ಪರಸ್ಪರ ಗೌರವ ಮನೋಭಾವವನನ್ನು ಹೊಂದಿದ್ದಾರೆ. ಪರಸ್ಪರ ಕೆಲಸ ವಿನಿಮಯ ಪ್ರತಿ ಸಮುದಾಯದಲ್ಲೂ ನಡೆಯುವುದರಿಂದ ಒಂದು ಸಮುದಾಯದ ಅಗತ್ಯ ಮತ್ತೊಂದು ಸಮುದಾಯಕ್ಕಿರುತ್ತದೆ. ಕನಕನ ಹಬ್ಬವನ್ನು ನಿರ್ದಿಷ್ಟ ಒಂದು ಸಮುದಾಯ ನಿರ್ವಹಿಸುವ, ಆಚರಿಸುವ ಜವಾಬ್ದಾರಿ ಹೊತ್ತಿದ್ದರೂ, ಪ್ರತಿಯೊಂದು ಸಮುದಾಯದವರೂ ಸೇರಿ ಹಬ್ಬ ಆಚರಿಸುತ್ತಾರೆ. ಸಾಮರಸ್ಯದ ಬದುಕು ಮಹದೇವಪುರದಲ್ಲಿದೆ. ಮಳೆಗಾಲದಲ್ಲಿ ಕನಕನ ಕಲ್ಲಿನ ದರ್ಶನ ಪಡೆಯಬೇಕಾದರೆ 'ಕೂಡಲ ಸಂಗಮ' ಮಾದರಿಯಲ್ಲಿ ಈ ಪ್ರದೇಶವನ್ನು ಅಭಿವೃದ್ಧಿ ಮಾಡಬೇಕು ಎಂದು ಮಹದೇವಪುರ ಗ್ರಾಮಸ್ಥರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಸದ್ಯ ಕನಕನ ಕಲ್ಲು ಇರುವ ಸ್ಥಳದಲ್ಲಿ 25 ಲಕ್ಷ ವೆಚ್ಚದಲ್ಲಿ ಸೋಪಾನ ಕಟ್ಟೆ ನಿರ್ಮಿಸಲಾಗಿದೆ. ನದಿ ದಡದಿಂದ ಕನಕನ ಕಲ್ಲಿನವರೆಗೆ ಕೊಳಾಯಿ ಮಾದರಿಯ ರಕ್ಷಣಾ ಗೋಡೆ ನಿರ್ಮಿಸಲು ಕಾವೇರಿ ನೀರಾವರಿ ನಿಗಮ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಅದು ನೆನೆಗುದಿಗೆ ಬಿದ್ದಿದೆ. ಏನೇ ಆಗಲಿ ಮಹದೇವಪುರ ಗ್ರಾಮದ ಜನಪದರ ಬದುಕಿನಲ್ಲಿ ಇನ್ನೂ ಸಂಪ್ರದಾಯಗಳು ಮತ್ತು ನಂಬಿಕೆಗಳು ಹಾಸುಹೊಕ್ಕಾಗಿದ್ದು ಸಹಮತ, ಸಹಬಾಳ್ವೆಯನ್ನು ಸಾರುತ್ತವೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ಮಹದೇವ ಮಹದೇವಪುರ : ಮಹದೇವಪುರ ಸಾಂಸ್ಕೃತಿಕ ಅಧ್ಯಯನ
- ಶಿರೂರ, ಬಿ.ವಿ. (2016). *ಸಂಶೋಧನ ಸ್ವರೂಪ.* ಅನ್ನಪೂರ್ಣ ಪ್ರಕಾಶನ


**ವಕ್ತೃ**

- ಬೋರಪ್ಪ, ಗಂಗಾಮತಸ್ಥ, ಮಹದೇವಪುರ